# ಆ್ಯಕ್ಷನ್–ಕಟ್–ಆ್ಯಕ್ಷನ್!

ಹಣೆ ಮೇಲೆ ಅಳತೆ ಮಾಡಿದಂತೆ ಅಚ್ಚುಕಟ್ಟಾಗಿ ಇಟ್ಟುಕೊಂಡ ಕುಂಕುಮ. ಬಿಳಿ ಅಂಗಿ. ಬಿಳಿ ಪ್ಯಾಂಟು. ಚಪ್ಪಲಿಯ ಬಣ್ಣವೂ ಬಿಳಿ. ಟ್ರಿಮ್ ಮಾಡಿಸಿಕೊಂಡ ಮೀಸೆ. ಚಾಚಿಕೊಂಡ ಹಲ್ಲುಗಳ ನಿಸ್ಸಂಕೋಚ ನಗೆ. ಮಾತಿನ ನಡುವೆ ಆಗಾಗ ವ್ಯಂಗ್ಯ. ತಮ್ಮ ಜೋಕಿಗೆ ತಾವೇ ಬಿದ್ದುಬಿದ್ದು ನಗುವಷ್ಟು ವಿಶಾಲ ಹೃದಯ. ಕಷ್ಟಪಟ್ಟು ಆವಾಹಿಸಿಕೊಂಡಂತೆ ಕಾಣುವ ವಿನಯ.

ಮೊದಲ ನೋಟಕ್ಕೆ ಹೀಗೆ ನಿಲುಕುವ ಚಿತ್ರ ನಿರ್ದೇಶಕರಿಗೆ ದಶಕಗಳ ಅನುಭವವಿದೆ. ಮೊದಲು ಸಣ್ಣಪುಟ್ಟ ಪಾರ್ಟಿಗಳಲ್ಲಿ ನಗೆಯುಕ್ಕಿಸಲು ಯತ್ನಿಸಿದ ಅವರು ಸಹಾಯಕ ನಿರ್ದೇಶಕರಾಗಿ ಬೆವರು ಸುರಿಸಿದರು. ನೋಡನೋಡುತ್ತಲೇ ಬೆಳೆದರು. ಒಂದೊಳ್ಳೆ ಚೈತ್ರದಲ್ಲಿ ಪ್ರೇಮಾಂಜಲಿ ಮೊಳಗಿಸಿದರು. ಯಾರದ್ದೋ ಹಾಡು, ಯಾರದ್ದೋ ಮಟ್ಟು, ಇನ್ಯಾರಿಗೋ ಕ್ರೆಡಿಟ್ಟು... ಹೀಗೆ ಒಪ್ಪಿತ 'ಅದಲಿ ಬದಲಿ ಕಂಚಿ ಕದಲಿ'ಗಳನ್ನು ಜಾರಿಗೆ ತಂದು ಯಶಸ್ಸಿನ ಸವಿಯುಂಡರು. ಅವರಿಗೆ ತಮಿಳರೆಂದರೆ ಮೆಚ್ಚು. ತೆಲುಗಿನವರೂ ಆಗುತ್ತಾರೆನ್ನಿ. ತಮಿಳರ ಭಾವುಕತೆ, ತೆಲುಗರ ಗೀತ ರಸಿಕತೆ ಎರಡನ್ನೂ ಅನಾಮತ್ತಾಗಿ ಎತ್ತಿಕೊಂಡು ತಮ್ಮದೇ ಆಗಿಸಿಕೊಂಡು ಬೀಗಬಲ್ಲ ಧೈರ್ಯ ಅವರದ್ದು. ಸಿನಿಮಾ ಧ್ಯಾನದ ನಡುವೆ ಕಿರುತೆರೆಯ ಹುಲ್ಲುಗಾವಲಿನಲ್ಲೂ ಮೇವನ್ನುಂಡರು. ನೀಳಕಾಯದ, 'ಸವಾಲಿನ ಸ್ಟಾರ್' ನಟನನ್ನು ಕಿರುತೆರೆ ಮೂಲಕ ಪರಿಚಯಿಸಿದ ಅಗ್ಗಳಿಕೆಯೂ ಅವರದ್ದೇ.

ಹೀಗಿರುವ ನಿರ್ದೇಶಕರಿಗೆ ಕಚಗುಳಿ ಇಡಬಲ್ಲ ಅಭಿನಯ ಸಾಮರ್ಥ್ಯವಿದೆ. ರೀಮೇಕು ಜೋಕುಗಳನ್ನು ತಮ್ಮದಾಗಿಸಿಕೊಂಡು ಅವರು ಹಲ್ಲು ಕಿರಿದಾಗ ನಕ್ಕ ಪ್ರೇಕ್ಷಕ ಮಹಾಪ್ರಭುವಿನಿಂದ ಗಲ್ಲಾಪೆಟ್ಟಿಗೆ ಆಗೀಗ ತುಂಬಿದೆ. ನಟನೆ, ಬರವಣಿಗೆ, ಗೀತಸಾಹಿತ್ಯ, ಸಂಭಾಷಣೆ ಎಲ್ಲದರಲ್ಲೂ ಕೈಪಳಗಿಸಿಕೊಳ್ಳುತ್ತಾ ಹೋದ ಅವರು ಯಾವ್ಯಾವುದೋ ಸಂಗೀತವೆಲ್ಲಾ ನಮ್ಮ ಚಿತ್ರಲೋಕಕ್ಕೆ ಹರಿದುಬರುತ್ತಿರುವುದನ್ನು ಕಂಡು ಸುಮ್ಮನೆ ಕೂರಲಿಲ್ಲ. ತಾವೇ ಸಂಗೀತ ನಿರ್ದೇಶಕರೂ ಆಗಿಬಿಟ್ಟರು. ಶ್ರದ್ಧೆಯಿಂದ ಸೀಡಿಗಳನ್ನು ಕೇಳಿ, ಹದವರಿತು ಕಂಪ್ಯೂಟರ್‌ಗೆ ಕಾಪಿ ಮಾಡಿ, ಒಂದಿಷ್ಟು ಬೆರೆಸಿ, ಅಲ್ಲಲ್ಲಿ ಕೆಡಿಸಿ ಗೀತೆಗಳಿಗೆ ರಾಗ ಸಂಯೋಜನೆ ಮಾಡಿ ಬೀಗಿದರು.

ತಮ್ಮ ಮಗ ವಯಸ್ಸಿಗೆ ಬಂದದ್ದೇ ಆತನಿಗಾಗಿ ಒಂದು ಸಿನಿಮಾ ತೆಗೆದರು. ಆದರೆ, ಬರಕತ್ತಾಗಲಿಲ್ಲ. ಮಧ್ಯೆ ವಯಸ್ಸನ್ನೂ ಲೆಕ್ಕಿಸದೆ ಅತಾರ್ಕಿಕ ಹಾಸ್ಯಚಿತ್ರಗಳಲ್ಲಿ ಎರಡು ಮೂರು ನಾಯಕರಲ್ಲಿ ತಾವೂ ಒಬ್ಬರಾಗಿ ಮರ ಸುತ್ತಿದರು. ಕುಣಿದರು. ನುಲಿದರು. ಹೀಗೆ ಮಾಡುವ ಮೊದಲೇ ಅವರಿಗೆ ವರನಟನ ಸಿನಿಮಾ ನಿರ್ದೇಶಿಸುವ ಭಾಗ್ಯ ಒಲಿದುಬಂದಿತ್ತು. ಅದು ಯಶಸ್ಸಿನ ಏಣಿಯ ಕೊನೆ ಮೆಟ್ಟಿಲುಗಳತ್ತ ಜಿಗಿಯಲು ಕಾರಣವಾಯಿತು.

ಅಂಬರೀಷ್ ಎಂದರೆ ಅವರಿಗೆ ತುಂಬಾ ಇಷ್ಟ. ಗೆದ್ದ ನಾಯಕರ ಕಾಲ್‌ಷೀಟ್‌ಗಳೆಂದರೆ ಪ್ರಾಣ. ಗಾಳಿ ಬಂದೆಡೆ ತೂರಿಕೊಳ್ಳುವ ಕಲೆಯೂ ಕರಗತ. ಪುತ್ರಮೋಹ ಸುಪ್ತ. ಹಾಗಾಗಿಯೇ ನೂರಾಎಂಬತ್ತು ಹುಡುಗರನ್ನು ಸ್ಕ್ರೀನ್ ಟೆಸ್ಟ್‌ಗೆ ಕರೆದು, ಅವರೆಲ್ಲರಿಗಿಂತ ತಮ್ಮ ಮಗನೇ ವಾಸಿ ಎಂದು ಆಯ್ಕೆ ಮಾಡಿ ಇನ್ನೊಂದು ಸಿನಿಮಾ ಮಾಡಿ ಕೃತಾರ್ಥರಾದರು.

ಮುಹೂರ್ತದ ದಿನವೇ ಸಿನಿಮಾ ಬಿಡುಗಡೆ ದಿನಾಂಕವನ್ನೂ ಗೊತ್ತುಪಡಿಸುವ ಪಕ್ಕಾ ಲೆಕ್ಕಾಚಾರದ ವ್ಯಕ್ತಿತ್ವ ಅವರದ್ದು. ಇತ್ತೀಚೆಗೆ ಏಕೋ ತುಂಬಾ ನೊಂದುಕೊಂಡರು. ಚಿತ್ರೋದ್ಯಮದಿಂದ ನಿವೃತ್ತಿ ಪ್ರಕಟಿಸಿದರು. ನಂತರ ರಾಜಕಾರಣಿಗಳಿಗೆ ಬರುವಂತೆ, ಇವರಿಗೂ ಆಪ್ತೇಷ್ಟರಿಂದ ಒತ್ತಾಯ ಬಂತಂತೆ. ಅದಕ್ಕೇ ನಿವೃತ್ತಿಯನ್ನು ವಾಪಸ್ ಪಡೆದು, 'ಮುಜುಗರವಾಗುತ್ತಿದೆ' ಎಂದು ಮತ್ತೆ ನಕ್ಕರು.

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68